# ಕರ್ನಾಟಕ ವಿಧಾನ ಸಭೆ

ಸೋಮವಾರ ೧೨ನೇ ಸೆಪ್ಟೆಂಬರ್ ೧೯೮೩

(ವಿಧಾನ ಸೌಧದಲ್ಲಿರುವ ವಿಧಾನ ಸಭೆಯು ಸಭಾಂಗಣದಲ್ಲಿ ಸದನವು ಹನ್ನೊಂದು ಗಂಟೆಗೆ ಸಮಾವೇಶಗೊಂಡಿತು)

ಶ್ರೀ ಡಿ. ಬಿ. ಚಂದ್ರೇಗೌಡರವರು (ಅಧ್ಯಕ್ಷ ಪೀಠವನ್ನಲಂಕರಿಸಿದರು)

## ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಬಗ್ಗೆ

೩೫೯ (೪೨) ಶ್ರೀ ಜಿ. ಎಸ್. ಬಸವರಾಜ್ (ಅರಸೀಕೆರೆ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಅರಸೀಕೆರೆ ಕ್ಷೇತ್ರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವಸತಿ ಇರುವ ನೌಕರರ ಸಂಖ್ಯೆ ಎಷ್ಟು ? ದಜೆಗೆ ಅನುಗುಣವಾದ ವಿವರವನ್ನು ಕೊಡಿ.

ಆ) ಭರ್ತಿಯಾಗದೇ ಇರುವ ನೌಕರರ ಸಂಖ್ಯೆ ಎಷ್ಟು ?

ಇ) ಈ ಜಾಗಗಳು ಎಷ್ಟು ದಿವಸಗಳಿಂದ ಖಾಲಿ ಇವೆ ? ಭರ್ತಿ ಮಾಡಲು ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ೪೪

ಆ) ೩೩

ಇ) ವಿವರಗಳಿಗೆ ಅನುಬಂದ ೨ನ್ನು ನೋಡಿ.

ಆರೋಗ್ಯ ಕಾರ್ಯಕರ್ತ, ಪ್ರಯೋಗಾಲಯ ತಂತ್ರಜ್ಞರ ಹುದ್ದೆಗಳನ್ನು ಇಲಾಖಾ ನೇಮಕಾತಿಯ ಸಮಿತಿಯ ಮೂಲಕ ತುಂಬಲು ಅರ್ಜಿಗಳನ್ನು ಪ್ರೀಕರಿಸಿದ್ದು ಅವುಗಳನ್ನು ಸಂಸ್ಕರಿಸಲಾಗುತ್ತಿದೆ. ಇಲಾಖೆ ನೇಮಕಾತಿ ಸಮಿತಿಯು ಜುಲೈ ೮೩ರಲ್ಲಿ ಪುನರ್ರಚನೆಯಾಗಿದೆ ಮತ್ತು ಹುದ್ದೆಗಳನ್ನು ಆದಷ್ಟು ಬೇಗ ತುಂಬಲಾಗುವುದು. ಲೋಕಸೇವಾ ಆಯೋಗವು ಸದ್ಯದಲ್ಲಿ ೨೯೧ ಮಂದಿ ವೈದ್ಯಾಧಿಕಾರಿಗಳನ್ನು ಆಯ್ಕೆ ಮಾಡುವ ನಿರೀಕ್ಷೆ ಇದೆ ಮತ್ತು ೩೬ ಮಂದಿ ಸಹಾಯಕ ದಂತ ಶಸ್ತ್ರ ಚಿಕಿತ್ಸಕರನ್ನು ಸಹ ಭರ್ತಿ ಮಾಡಲು ಲೋಕಸೇವಾ ಆಯೋಗವನ್ನು ಕೋರಲಾಗಿದೆ. ಕರ್ನಾಟಕ ಲೋಕಸೇವಾ ಆಯೋಗವು ಮಹಿಳಾ ವೈದ್ಯಾಧಿಕಾರಿಗಳನ್ನು ಆಯ್ಕೆ ಮಾಡಿದೆ ಮತ್ತು ಸದ್ಯದಲ್ಲಿಯೇ ಆ ಹುದ್ದೆಗಳನ್ನು ಭರ್ತಿ ಮಾಡಲಾಗುವುದು, ಬೇರೆ ಹುದ್ದೆಗಳನ್ನು ತುಂಬಲು ಸಹಾ ಕ್ರಮ ಕೈಗೊಳ್ಳಲಾಗುತ್ತಿದೆ.

## ಅನುಬಂಧ—I

ಅರಸೀಕೆರೆ ಕ್ಷೇತ್ರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವಾ ಇಲಾಖೆಯಲ್ಲಿ ಸರಕಾರಿ ನೌಕರರುಗಳಿಗೆ ಒದಗಿಸಿರುವ ವಸತಿ ಸೌಲಭ್ಯಗಳ ವಿವರ :—

| ಕ್ರಮ ಸಂಖ್ಯೆ | ಸ್ಥಳ | ಒಟ್ಟು ವಸತಿಗಳು | ವೈದ್ಯಾಧಿಕಾರಿ | ಮಹಿಳಾ ವೈದ್ಯಾಧಿಕಾರಿ | ಔಷದಿ ಮಿಶ್ರಕ | ಮಹಿಳಾ ಆರೋಗ್ಯ ಸಹಾಯಕಿ | ಪರಿಚಾರಕಿ | ಹಿರಿಯ ಆರೋಗ್ಯ ತನಿಖಾಧಿಕಾರಿ | ಸ.ಶು.ದಾ. | ಗುಮಾಸ್ತ (ಗಣಕ) | ಸ.ದಾ.ಸಾ |
|---|---|---|---|---|---|---|---|---|---|---|---|
| ೧. | ಅರಸೀಕೆರೆ | ೬ | ೧ | ೧ | ೧ | ೧ | — | — | ೧ | ೧ | — |
| ೨. | ಹಾರನಹಳ್ಳಿ | ೮ | ೧ | ೧ | ೧ | ೧ | — | ೧ | ೨ | ೧ | — |
| ೩. | ಕಣಕಟ್ಟೆ | ೮ | ೧ | ೧ | ೧ | ೧ | — | ೧ | ೨ | ೧ | — |
| ೪. | ಜೆ.ಸಿ. ಪುರ | ೮ | ೧ | ೧ | ೧ | ೧ | — | — | ೨ | — | ೨ |
| ೫. | ಡಿ.ಎಂ. ಕುರ್ಕೆ | ೭ | ೧ | ೧ | ೧ | — | — | — | ೨ | — | ೨ |
| ೬. | ಬಾಣಾವಾರ | ೪ | ೧ | — | ೧ | — | — | — | ೨ | — | — |
| ೭. | ಜಾಪಗಲ್ | ೩ | ೧ | — | ೧ | — | — | — | ೧ | — | — |
| | | ೪೪ | ೭ | ೫ | ೭ | ೪ | — | ೨ | ೧೨ | ೩ | ೪ |

ಅನುಬಂಧ—2

| | | | |
|---|---|---|---|
| ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಘಟಕ | ಕೊಣಕೆರೆ | ೧ | ೧-೮-೮೩ |
| ಮಹಿಳಾ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಘಟಕ | ದೇಸಿಪುರ | ೧ | ೨ ತಿಂಗಳಿಂದ |
| ಮಹಿಳಾ ವೈದ್ಯಾಧಿಕಾರಿ. ಪ್ರಾಥಮಿಕ ಆರೋಗ್ಯ ಘಟಕ | ಡಿ.ಎಂ.ಕಾರ್ಕಿ | ೧ | ೧-೮-೮೨ ರಿಂದ |
| ಮಹಿಳಾ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಘಟಕ | ಕಣಕಟ್ಟಿ | ೧ | ಒಂದೂವರೆ ವರ್ಷದಿಂದ |
| ಮಹಿಳಾ ವೈದ್ಯಾಧಿಕಾರಿ. ಪ್ರಾಥಮಿಕ ಆರೋಗ್ಯ ಘಟಕ | ಹಾರನಹಳ್ಳಿ | ೧ | ಆಗಸ್ಟ್ ೮೨ ರಿಂದ |
| ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಘಟಕ | ಪಂಡಿಗನಾಲ್ | ೧ | ಹೊಸದಾಗಿ ಮಂಜೂರಾದುದು |
| ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಘಟಕ | ಹಂಡ್ಯಾಲ | ೧ | —,,— |
| ಸಹಾಯಕ ದಂತ ಚಿಕಿತ್ಸಕ ಸಾರ್ವಜನಿಕ ಆಸ್ಪತ್ರೆ | ಅರಸೀಕೆರೆ | ೧ | ೧-೮-೮೨ ರಿಂದ |
| ಸಹಾಯಕ ದಂತ ಚಿಕಿತ್ಸಕ ಸಾರ್ವಜನಿಕ ಆಸ್ಪತ್ರೆ | ನೆರಳಿಗ | ೧ | |
| ವೈದ್ಯಾಧಿಕಾರಿ ಸರ್ಕಾರಿ ಆಯುರ್ವೇದ ಔಷದಾಲಯ | ಬಾಗೇಶಪುರ | ೧ | |
| ವೈದ್ಯಾಧಿಕಾರಿ ಸರ್ಕಾರಿ ಆಯುರ್ವೇದ ಔಷದಾಲಯ | ಆರಕೆರೆ | ೧ | |
| ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಘಟಕ | ಯದವನಹಳ್ಳಿ | ೧ | |
| ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಘಟಕ | ನಂಜಿಗೆರೆಪುರ | ೧ | |

ಇದಲ್ಲದೆ ಈ ಕೆಳಕಂಡ ''ಸಿ'' ದರ್ಜೆಯ ನೌಕರರ ಹುದ್ದೆಗಳು ಖಾಲಿ ಇವೆ.

| | | | |
|---|---|---|---|
| ಹಿರಿಯ ಆರೋಗ್ಯ ತನಿಖಾಧಿಕಾರಿ. ಪ್ರಾಥಮಿಕ ಆರೋಗ್ಯ ಕೇಂದ್ರ | ಕಣಕಟ್ಟೆ | ೧ | ೧-೮-೮೩ ರಿಂದ |
| ಔಷಧಿ ವಿಶ್ಲೇಷಕರ ಹುದ್ದೆ—೨— | ಹುಂಡಗನಾಲ್ ಹಂದ್ಯಾಲ್ | ೨ | ಜುಲೈ ೮೩ ರಿಂದ |
| ಎರಡನೇ ದರ್ಜೆ ಗುಮಾಸ್ತರು-೨- ಪ್ರಾಥಮಿಕ ಆರೋಗ್ಯ ಕೇಂದ್ರ. ಪ್ರಾಥಮಿಕ ಆರೋಗ್ಯ ಘಟಕ | ಕನಿಕಟ್ಟೆ ಬಾಣಾವರ | | ಸೆಪ್ಟೆಂಬರ್ ೮೨ ರಿಂದ ಜೂನ್ ೮೩ ರಿಂದ |
| ಪ್ರಯೋಗಶಾಲಾ ತಂತ್ರಜ್ಞ. ಪ್ರಾಥಮಿಕ ಆರೋಗ್ಯ ಘಟಕ | ಬಾಣಾವರ | ೧ | ಜೂನ್ ೮೩ ರಿಂದ |
| ಪುರುಷ ಆರೋಗ್ಯ ಕಾರ್ಯಕರ್ತ | | | |
| ಪ್ರಾಥಮಿಕ ಆರೋಗ್ಯ ಕೇಂದ್ರ | ಕಣಕಟ್ಟೆ | ೪ | ಜೂನ್ ೮೨ ರಿಂದ |
| ಪ್ರಾಥಮಿಕ ಆರೋಗ್ಯ ಕೇಂದ್ರ | ಹಾರನಹಳ್ಳಿ | ೧ | —,,— |
| ರಿಪ್ರಾಕನಿಸ್ಟ್ | | ೨ | |
| ಸಹಾಯಕ ಶುಶ್ರೂಷಕ ದಾದಿ | | | |
| ಪ್ರಾಥಮಿಕ ಆರೋಗ್ಯ ಕೇಂದ್ರ | ಹಾರನಹಳ್ಳಿ | ೩ | ಜುಲೈ ೮೨ ರಿಂದ |
| ಪ್ರಾಥಮಿಕ ಆರೋಗ್ಯ ಕೇಂದ್ರ | ಕಣಕಟ್ಟೆ | ೪ | —,,— |

ಶ್ರೀ ಜಿ.ಎಸ್. ಬಸವರಾಜ್ (ಅರಸೀಕೆರೆ).—ಅರಸೀಕೆರೆ ಕ್ಷೇತ್ರದಲ್ಲಿ ಆರೋಗ್ಯ ಇಲಾಖೆಯಲ್ಲಿ ೩೩ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದಾರೆ. ಈ ಹುದ್ದೆಗಳನ್ನು ಪಿ.ಎಸ್.ಸಿ. ಮೂಲಕ ಮತ್ತು ಇಲಾಖೆ ನೇಮಕಾತಿ ಸಮಿತಿ ಮೂಲಕ ಭರ್ತಿ ಮಾಡಲಾಗುವುದೆಂದು ಹೇಳಲಾಗಿದೆ. ಅವರು ಈ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಹೊತ್ತಿಗೆ ಅಲ್ಲಿರುವ ರೋಗಿಗಳ ಗತಿ ಏನಾಗ

ಬೇಕು? ಆದ್ದರಿಂದ ಆದಷ್ಟೂ ಬೇಗ ಅಲ್ಲಿಗೆ ವೈದ್ಯರನ್ನು ಮತ್ತು ಇತರೆ ಸಿಬಂದಿ ವರ್ಗದವರನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಮಾನ್ಯ ಮಂತ್ರಿಗಳು ಮೊನ್ನೆ ನಮ್ಮ ಊರಿಗೆ ಬಂದಾಗ ಅಲ್ಲಿನ ಆಸ್ಪತ್ರೆಗೆ ಭೇಟಿ ಕೊಟ್ಟು ಅಲ್ಲಿದ್ದ ಶಸ್ತ್ರವೈದ್ಯರನ್ನು ಬೇರೆಡೆಗೆ ವರ್ಗ ಮಾಡಿ ಅವರ ಜಾಗಕ್ಕೆ ದಂತ ವೈದ್ಯರನ್ನು ಹಾಕಿದ್ದಾರೆ, ಇದರಿಂದ ಅಲ್ಲಿ ಈಗ ಶಸ್ತ್ರ ವೈದ್ಯರಿಲ್ಲದೆ ಬಹಳ ತೊಂದರೆಯಾಗಿದೆ, ಆದ್ದರಿಂದ ಶಸ್ತ್ರ ವೈದ್ಯರನ್ನು ಮತ್ತು ಮಹಿಳಾ ವೈದ್ಯರನ್ನು ಅಲ್ಲಿಗೆ ನೇಮಕ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರತಕ್ಕಂಥ ಖಾಲಿ ಹುದ್ದೆಗಳಿಗೆ ಆದಷ್ಟೂ ಶೀಘ್ರವಾಗಿ ನೇಮಕ ಮಾಡಲು ನಾನು ಸೂಕ್ತ ಕ್ರಮ ಕೈಕೊಳ್ಳುತ್ತೇನೆ. ಅರಸೀಕೆರೆ ಆಸ್ಪತ್ರೆಯಲ್ಲಿ ವೈದ್ಯರ ವರ್ಗದ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ, ನಾನು ಅಲ್ಲಿಗೆ ಹೋಗಿದ್ದಾಗ ಮಾನ್ಯ ಸದಸ್ಯರೆದುರೇ ಅಲ್ಲಿನ ಸಾರ್ವಜನಿಕರು ನನ್ನ ಬಳಿ ಬಂದು ಅಲ್ಲಿರುವ ವೈದ್ಯರುಗಳನ್ನು ಕೂಡಲೇ ವರ್ಗ ಮಾಡಬೇಕೆಂದು ದೊಡ್ಡದಾಗಿ ಪ್ರತಿಭಟನೆ ಮಾಡಿದ್ದರಿಂದ ಅಲ್ಲಿನ ವೈದ್ಯರನ್ನು ಮಹಿಳಾ ವೈದ್ಯರನ್ನು ವರ್ಗ ಮಾಡಲಾಯಿತು, ಈಗ ಬೇರೆಯವರನ್ನು ನೇಮಕ ಮಾಡಲು ನಾನು ಸೂಕ್ತ ಕ್ರಮ ಕೈಕೊಂಡಿದ್ದೇನೆ, ೧೪೨ ಜನ ಮಹಿಳಾ ವೈದ್ಯರ ಒಂದು ಪಟ್ಟಿಯನ್ನು ಪಿ.ಎಸ್.ಸಿ. ಅವರು ನಮಗೆ ಕಳುಹಿಸಿಕೊಟ್ಟಿದ್ದಾರೆ, ಇನ್ನು ೪-೫ ದಿವಸಗಳಲ್ಲಿ ಇವರನ್ನೆಲ್ಲಾ ಎಲ್ಲ ಕಡೆಗೂ ನೇಮಕ ಮಾಡುತ್ತಿದ್ದೇವೆ.

ಶ್ರೀ ಜಿ.ಎಸ್. ಬಸವರಾಜ್.—ಇಲ್ಲಿ ಅನುಭಂದದಲ್ಲಿ ಕೊಟ್ಟಿರುವ ವಿವರಗಳಲ್ಲಿ ಕೊನಕೆರೆ ಗ್ರಾಮವೂ ಸಹ ಸೇರಿಬಿಟ್ಟಿದೆ, ಆದರೆ ಇದು ನಮ್ಮ ತಾಲ್ಲೂಕ್‌ಗೆ ಸೇರಿಲ್ಲ, ಆದರೂ ಇದನ್ನು ಸೇರಿದ್ದಾರೆ, ಆದ್ದರಿಂದ ಈ ಬಗ್ಗೆ ತಾವು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ ಮತ್ತು ಈಗ ಖಾಲಿ ಇರತಕ್ಕಂಥ ಹುದ್ದೆಗಳನ್ನು ಜಾಗ್ರತೆ ಭರ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

## ಮುನಿರಾಬಾದ್‌ನಲ್ಲಿರುವ ತುಂಗಭದ್ರಾ ಪಲ್ಪ ಮತ್ತು ಬೋರ್ಡ್ ಮಿಲ್ಲಿನಿಂದಾಗಿ ತುಂಗಭದ್ರಾ ನದಿಯ ನೀರು ಕಲುಷಿತ ಗೊಂಡಿರುವುದರ ಬಗ್ಗೆ

(೧೧೪) ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್ (ಕೊಪ್ಪಳ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುನಿರಾಬಾದ್‌ನಲ್ಲಿರುವ ತುಂಗಭದ್ರಾ ಪಲ್ಪ ಮತ್ತು ಬೋರ್ಡ್ ಮಿಲ್ಸ್ ನವರು ತಮ್ಮ ಕಾರ್ಖಾನೆಯ ಕಷ್ಮಲ ನೀರನ್ನು ತುಂಗಭದ್ರಾ ನದಿಗೆ ಬಿಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ.

ಇ) ಪ್ರಸಿದ್ಧ ಹುಲಿಗೆಮ್ಮನ ದೇವಸ್ಥಾನಕ್ಕೆ ಬಂದ ಸಹಸ್ರಾರು ಭಕ್ತರು ಕುಲಷಿತ ನೀರನ್ನೆ ಕುಡಿದು ರೋಗ ಪೀಡಿತರಾಗುತ್ತಿರುವುದು ದನಕರುಗಳು ಹಾಗೂ ವಿಷಾನು ಇನ್ನಿತರ ಪ್ರಾಣಿಗಳು ಪ್ರಾಣ ನೀಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

ಅ) ಬಂದಿದೆ

ಆ) ಕಾರ್ಖಾನೆಯಿಂದ ಹೊರಬರುವ ಕಲ್ಮಷ ನೀರನ್ನು ನದಿಗೆ ಬಿಡಲು ಯೋಗ್ಯವಾದ ಗುಣಮಟ್ಟಿಗೆ ಸರಿಹೊಂದುವಂತೆ ಪರಿಷ್ಕರಿಸಲು ಕಾರ್ಖಾನೆಗೆ ಆದೇಶ ನೀಡಲಾಗಿದೆ, ಕಾರ್ಖಾನೆಯು ಪರಿಷ್ಕರಣದ ಯಂತ್ರಗಳನ್ನು ಹಾಕುವ ಕೆಲಸಗಳನ್ನು ಕೈಗೊಂಡಿದೆ. ಶೇಕಡ ೬೦ ಭಾಗದಷ್ಟು ಕೆಲಸವು ಆಗಿದೆ. ಪರಿಷ್ಕರಣ ಯಂತ್ರ ಜೋಡಣೆಯ ಕೆಲಸವು ಸಿಮೆಂಟಿನ ಅಭಾವದಿಂದಾಗಿ ಸ್ಥಗಿತಗೊಂಡಿತಾಗಿಯೂ ಮತ್ತು ಈ ಕೆಲಸವು ೧೯೮೪ರ ಜೂನ್ ತಿಂಗಳ ಅಂತ್ಯದ ವೇಳೆಗೆ ಸಂಪೂರ್ಣವಾಗು